ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-159/ವಾರ್ಡ್‌ಸಭೆ/2022-23 ದಿನಾಂಕ : 07/07/2022

## ವಾರ್ಡ್-159ರ ವಾರ್ಡ್ ಸಭೆಯ ನಡವಳಿ.

ದಿನಾಂಕ: 07/07/2022 ರಂದು ಕೆಂಗೇರಿ ಉಪ ವಿಭಾಗ ವಾರ್ಡ್-159ರ ವಾರ್ಡ್ ಕಛೇರಿಯಲ್ಲಿ ಶ್ರೀ ಬಿ.ಸಿ. ಶಿವಣ್ಣ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರ ಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ ಬಿ.ಕೆ. ಚಂದ್ರ ಶೇಖರ್ | ಸಹಾಯಕ ಅಭಿಯಂತರರು ಬೆಸ್ಕಾಂ, ಬೆಂಗಳೂರು | ಹಾಜರಿದ್ದರು |
| 2. | ಶ್ರೀ ಬಿ.ಸಿ. ರಾಮು | ಹಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | ಹಾಜರಿದ್ದರು |
| 3. | ಶ್ರೀ ಎಂ. ನವೀನ್‌ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ | ಹಾಜರಿದ್ದರು |
| 4. | ಶ್ರೀ ಚಲುವರಾಜು ಪಿ.ಹೆಚ್ | ಜಲ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು |
| 5. | ಶ್ರೀ ಚಂದ್ರ ಶೇಖರ್ ಎಂ | ಕಂದಾಯ ಅಧಿಕಾರಿ ಬಿ.ಬಿ.ಎಂ.ಪಿ | ಹಾಜರಿದ್ದರು |
| 6. | ಶ್ರೀ ಪ್ರದೀಪ್ | ಭಾರತೀಯ ನಾಗರೀಕರ ಸಮಿತಿ | ಹಾಜರಿದ್ದರು |
| 7. | ಶ್ರೀ ಮಂಜುನಾಥ್ | ಭಾರತೀಯ ನಾಗರೀಕರ ಸಮಿತಿ | ಹಾಜರಿದ್ದರು |
| 8. | ಶ್ರೀಮತಿ ಲಾವಣ್ಯ | ಜನರಲ್ ಸೆಕ್ರೇಟರಿ ಬಿ.ಜೆ.ಪಿ | ಹಾಜರಿದ್ದರು |
| 9. | ಶ್ರೀ ಸಂತೋಷ್ | ವಾರ್ಡ್ ಕಮಿಟಿ ಸದಸ್ಯರು | ಹಾಜರಿದ್ದರು |



Scanned with CamScanner

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-** ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು, ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಲಸಿಕೆಯನ್ನು ಪಡೆಯಲು ಸಾರ್ವಜನಿಕರು ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸಭೆಯಲ್ಲಿ ತಿಳಿಸಿದರು. ಕೋವಿಡ್ ಸುರಕ್ಷತಾ ನಿಯಮಾವಳಿಯನ್ನು ತಪ್ಪದೇ ಪಾಲಿಸಲು ಮತ್ತು ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸ್ಥಳಿಯ ನಿವಾಸಿಗಳಿಗೆ ಹಾಗೂ ಬಡಾವಣೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು ಮತ್ತು ಕೋವಿಡ್ ಬೂಸ್ಟರ್ ಲಸಿಕೆಯನ್ನು ಪಡೆದುಕೊಳ್ಳಲು ಮತ್ತು ಇದರ ಸದುಪಯೋಗ ಪಡೆಯಲು ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

2) ವಾರ್ಡ್ ನಂ.159ರ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಸುತ್ತಿಲ್ಲ. ಕಸ ಸಂಗ್ರಹಿಸುವ ಆಟೋಗಳು ಸರಿಯಾದ ವೇಳೆಯಲ್ಲಿ ಬರುತ್ತಿಲ್ಲ, ಕಸ ಸಂಗ್ರಹಣಾ ವಾಹನದಲ್ಲಿ ಗರಿಷ್ಠ ಮಟ್ಟಕ್ಕಿಂತ ಹೆಚ್ಚು ಕಸ ತುಂಬಿಕೊಂಡು ಹೋಗುತ್ತಾರೆ. ಇದರಿಂದ ಕಸ ವಾಹನದಿಂದ ರಸ್ತೆಯಲ್ಲಿ ಚೆಲ್ಲಿಕೊಂಡು ಹೋಗುತ್ತಿರುವ ಬಗ್ಗೆ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಿರಿಯ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಇನ್ನು ಮುಂದೆ ಸಮರ್ಪರ್ಕವಾಗಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ನಿರ್ವಹಣೆ ಮಾಡಲು ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

3) ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.159, ಕೆಂಗೇರಿ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಸರಿಯಾಗಿ ಅಳವಡಿಸದೇ ಇರುವುದರಿಂದ ರಾತ್ರಿ ವೇಳೆಯಲ್ಲಿ ಬೀದಿ ದೀಪಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಅಧಿಕಾರಿಯವರೊಂದಿಗೆ ಚರ್ಚಿಸಿ ಸದರಿ ಸಮಸ್ಯೆಯನ್ನು ಬಗೆಹರಿಸಲು ಕ್ರಮವಹಿಸುವಂತೆ ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

4) ನಾಗರೀಕರು ಸಭೆಯಲ್ಲಿ ಮಾತನಾಡಿ ವಾರ್ಡ್ ನಂ.159, ಕೆಂಗೇರಿ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚುಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಕೋರಿದರು.



Scanned with CamScanner

ಮಳೆಗಾಲವಾಗಿರುವುದರಿಂದ ಉಳಿದ ರಸ್ತೆ ಗುಂಡಿಗಳನ್ನು ಮುಚ್ಚಲು ವಿಳಂಬವಾಗುತ್ತಿದ್ದು, ಮುಂಬರುವ ದಿನಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

5) ವಾರ್ಡ್ ನಂ.159, ಕೆಂಗೇರಿ ವ್ಯಾಪ್ತಿಯಲ್ಲಿ ಮ್ಯಾನ್‌ಹೋಲ್ ಸಿಂಕ್ ಆಗುತ್ತಿರುವ ಬಗ್ಗೆ ನಾಗರೀಕರು ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಜಲ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮಾತನಾಡಿ ಸ್ಥಳ ಪರಿಶೀಲಿಸಿ ಸಮಸ್ಯೆಯನ್ನು ಪರಿಹರಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

(ಎಸ್. ಕೆ. ನಟರಾಜ್)
ಕಾರ್ಯದರ್ಶಿ
ವಾರ್ಡ್-159, ಕೆಂಗೇರಿ

(ಬಿ.ಸಿ. ಶಿವಣ್ಣ)
ನೋಡಲ್ ಅಧಿಕಾರಿ
ವಾರ್ಡ್-159, ಕೆಂಗೇರಿ

ರವರಿಗೆ,

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಸಹಾಯಕ ಕಂದಾಯ ಅಧಿಕಾರಿ ಅಧಿಕಾರಿಗಳು, ಕೆಂಗೇರಿ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, (ಫ.ತ್ಯಾ.ನಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
5) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಕಾನೂನು ಸುವ್ಯವಸ್ಥೆ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
6) ಪೊಲೀಸ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ (ಸಂಚಾರಿ) ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
7) ಆರೋಗ್ಯ ಅಧಿಕಾರಿ, ಕೆಂಗೇರಿ, ಕೆಂಗೇರಿ ಉಪನಗರ ಪ್ರಾ.ಆ.ಕೇಂದ್ರ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು ಕೋರಲಾಗಿದೆ.
8) ಸಹಾಯಕ ಇಂಜನಿಯರ್, ಬೆಸ್ಕಾಂ ಕೆಂಗೇರಿ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
9) ಸಹಾಯಕ ಇಂಜನಿಯರ್ ಬಿ.ಡಬ್ಲ್ಯೂ.ಎಸ್. ಎಸ್.ಬಿ., ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
10) ತೋಟಗಾರಿಕಾ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ, ಸದರಿ ಸಭೆಗೆ ಹಾಜರಾಗಲು/ತಮ್ಮ ಪ್ರತಿನಿಧಿ ಸಿಬ್ಬಂದಿಯವರನ್ನು ನಿಯೋಜಿಸಲು ಕೋರಲಾಗಿದೆ.
11) ವಾರ್ಡ್ ವ್ಯಾಪ್ತಿಯ ಸಾರ್ವಜನಿಕರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಲು ಅನುವಾಗುವಂತೆ ಸೂಚನಾ ಫಲಕಕ್ಕೆ ಅಳವಡಿಸಲು
12) ಎಲ್ಲಾ ವಾರ್ಡ್ ಕಮಿಟಿ ಸದಸ್ಯರುಗಳಿಗೆ.



Scanned with CamScanner